## ಹೊಸಮನೆ



ಮಗ ಸೊಸೆ ಭದ್ರಾವತಿಯಲ್ಲಿದ್ದಾಗ ನಾನು ಆಗಾಗ್ಗೆ ಭದ್ರಾವತಿಗೆ ಹೋಗಿ ಬರುತ್ತಿದ್ದೆ. ಒಮ್ಮೆ ಹೀಗೆ ಭದ್ರಾವತಿಗೆ ಹೋಗಿದ್ದಾಗ ಬಸ್ ನಿಲ್ದಾಣದಲ್ಲಿ ಅಪರೂಪದ ಗೆಳೆಯ ಸಿಕ್ಕು, ಅಲ್ಲಿಯೇ ಹೋಟೆಲ್ ಒಂದರಲ್ಲಿ ಚಹಾ ಕುಡಿಯಲು ಹೋದೆವು. ಅನಂತರ ಗೆಳೆಯ ಹೇಳಿದ, ‘ನಾನು ಈಗ ಬೇರೆ ಕೆಲಸದ ನಿಮಿತ್ತ ಶಿವಮೊಗ್ಗಕ್ಕೆ ಹೋಗ್ತಾ ಇದ್ದೀನಿ. ಎರಡು ದಿನಗಳ ನಂತರ ಭೇಟಿಯಾಗೋಣ. ನಾನು ಬಂದ ಮೇಲೆ ಹೊಸಮನೆಗೆ ಬಂದುಬಿಡು’ ಎಂದು. ನಾನು, ‘ಅರೆ, ಮತ್ತೆ ಹೊಸ ಮನೆ ತಗೊಂಡ್ಯಾ? ನಿನ್ನ ಹೊಸಮನೆ ನಾನು ನೋಡಿಲ್ಲ’ ಎಂದೆ. ಗೆಳೆಯ ನಗಲಾರಂಭಿಸಿದ. ನಂತರ ತಿಳಿಯಿತು. ಭದ್ರಾವತಿಯಲ್ಲಿ ಹೊಸಮನೆ ಎಂಬುದು ಒಂದು ಏರಿಯಾ ಎಂದು. ಆಗ, ‘ಆಯ್ತು ಹೊಸಮನೆಗೆ ಬಂದು ಫೋನ್ ಮಾಡುತ್ತೇನೆ’ ಎಂದು ಹೇಳಿ ಹೊರಟು ಬಂದೆ.

**ಪ್ರಕಾಶ್ ಮಲ್ಕಿಒಡೆಯರ್**






ಕಲೆ: ಗಣೇಶ ಆಚಾರ್ಯ

## ಹೆಂಡತಿ ಸಿಟ್ಟಾದಾಗ

ಹೆಂಡತಿ ಇತ್ತೀಚಿನ ದಿನಗಳಲ್ಲಿ ತುಂಬಾ ರೇಗಾಡುತ್ತಿದ್ದಾಳೆ ಎಂದು ಅನ್ನಿಸತೊಡಗಿತ್ತು. ಸಣ್ಣ ಪುಟ್ಟ ವಿಷಯಗಳಿಗೆಲ್ಲ ಬಹುಬೇಗ ಸಿಟ್ಟು ಮಾಡಿಕೊಳ್ಳುತ್ತಿದ್ದಳು. ಮೊದಮೊದಲು ಅದನ್ನು ಸಹಿಸಿಕೊಂಡೇನಾದರೂ ಅವಳ ಅತಿಯಾದ ರೇಗಾಟ ಬರುಬರುತ್ತಾ ಬೇಜಾರಾಗಿ ಇದಕ್ಕೆ ಏನಾದರೂ ಪರಿಹಾರ ಕಂಡುಕೊಳ್ಳಬೇಕು ಎನಿಸಿತು. ತುಂಬಾ ಯೋಚನೆ ಮಾಡಿ ಒಂದು ದಿನ ಅವಳು ತುಂಬಾ ಜೋರಾಗಿ ರೇಗಾಡುತ್ತಿರುವಾಗ, ‘ಸಾಮಾನ್ಯವಾಗಿ ವಯಸ್ಸು ಜಾಸ್ತಿಯಾದಂತೆಲ್ಲ ರೇಗಾಡುವಿಕೆ ಜಾಸ್ತಿ ಆಗುತ್ತದಂತೆ. ನೀನು ಹೀಗೆ ಬಿಟ್ಟುಬಿಡದೇ ಸಿಟ್ಟು ಮಾಡಿಕೊಳ್ಳುವುದು ನೋಡಿದರೆ ನಿನಗೂ ವಯಸ್ಸು ಜಾಸ್ತಿ ಆಯ್ತು ಅನಿಸುತ್ತಿದೆ’ ಎಂದು ಹೇಳಿದೆ. ಅಂದಿನಿಂದ ಅವಳು ನನ್ನ ಜೊತೆ ಸಿಟ್ಟಿನಿಂದ ಮಾತನಾಡಲೇ ಇಲ್ಲ.

**ಭೋಜರಾಜ ಸೊಪ್ಪಿಮಠ**